**SC No. 160/2022**
**PW-26**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 160/2022**

| | | |
|---|---|---|
| ಸಾಕ್ಷಿದಾರರ ಹೆಸರು | ಮಹೇಂದ್ರ ಬಿ. | ಪ್ರಮಾಣ ವಚನ ಮಾಡಿದ ದಿನಾಂಕ: **11.02.2026** |
| ತಂದೆಯ/ಗಂಡನ ಹೆಸರು | ಬಸವಣ್ಣ @ ಪರಮೇಶ್ವರಪ್ಪ | |
| ವಯಸ್ಸು | 44 ವರ್ಷ | |
| ವೃತ್ತಿ | ಪಿ.ಎಸ್.ಐ, ಎಸ್.ಪಿ. ಕಛೇರಿ ಮೈಸೂರು | ಫ್ರಾ.ಸಾಃ 26 |
| ವಾಸ ಸ್ಥಳ | ಮೈಸೂರು | ಚಾ.ಸಾಃ 45 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಕವಲಂದೆ ಪೊಲೀಸ್ ಠಾಣೆಯಲ್ಲಿ ನವೆಂಬರ್ *2020* ರಿಂದ ಜನವರಿ *2023* ರವರೆಗೆ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ 03.01.2022 ರಂದು ರಾತ್ರಿ 20.30 ಗಂಟೆ ಸಮಯದಲ್ಲಿ ಪಿರ್ಯಾದುದಾರರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ 1/2022 ಕಲಂ 302 ಸಹಕಲಂ 149 ಐಪಿಸಿ ರೀತ್ಯ ಪ್ರಕರಣ ದಾಖಲಿಸಿ ಪ್ರ.ವ. ವರದಿ ಮತ್ತು ದೂರನ್ನು ನ್ಯಾಯಾಲಯಕ್ಕೆ ಮತ್ತು ಸದರಿ ಪ್ರತಿಗಳನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೆನು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ

ನಿಪಿ.1 ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು **ನಿಪಿ.1(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.45** ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ. 45 (ಎ)** ಎಂದು ಗುರುತಿಸಲಾಯಿತು.

ದಿನಾಂಕ 04.01.2022 ರಂದು ಸದರಿ ಪ್ರಕರಣದಲ್ಲಿ ಆರೋಪಿತನನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಸಿಪಿಐ ರವರು ಜ್ಞಾಪನವನ್ನು ನೀಡಿದ್ದರು. ಸಾಕ್ಷಿದಾರರು ಜ್ಞಾಪನವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.46** ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.46(ಎ)** ಎಂದು ಗುರುತಿಸಲಾಯಿತು.

ದಿನಾಂಕ 08.01.2022 ರಂದು ಸದರಿ ಪ್ರಕರಣದ ಆರೋಪಿತರ ಪತ್ತೆ ಸಂಬಂಧ ಹೆಚ್.ಸಿ 128 ಲಿಂಗದೇವರು, ಹೆಚ್.ಸಿ 283 ಮುರುಳಿಧರ ಮತ್ತು ಪಿಸಿ 452 ಲೊಕೇಶ್ ರವರನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಮಲ್ಲಹಳ್ಳಿ, ತರದಲೆ ಕಡೆ ಗಸ್ತು ಮಾಡುತ್ತಿದ್ದಾಗ ನಮಗೆ ಬಾತ್ಮಿದಾರರಿಂದ ಮಾಹಿತಿ ಬಂದಿದ್ದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಕೂಡ್ಲಾಪುರ ಗ್ರಾಮದ ಬಸ್ ನಿಲ್ದಾಣದಲ್ಲಿ ಆರೋಪಿತರಾದ ಮಹದೇವಸ್ವಾಮಿ ಬಿನ್ ಪುಟ್ಟಸ್ವಾಮಿ, ಅರುಣ ಬಿನ್ ಮುದ್ದಶೆಟ್ಟಿ ಭರತ್ ಬಿನ್ ಸಿದ್ದರಾಜು ರವರನ್ನು ವಶಕ್ಕೆ ಪಡೆದು 14.30 ಗಂಟೆಗೆ ನಂಜನಗೂಡು ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಸಿಪಿಐ ರವರ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿದ್ದೆನು. ಸಾಕ್ಷಿದಾರರು ನಿವೇದನೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.47** ಎಂದು, ಸಾಕ್ಷಿದಾರರ

ಸಹಿಯನ್ನು ನಿಪಿ.47 (ಎ) ಎಂದು ಗುರುತಿಸಲಾಯಿತು.

ದಿನಾಂಕ 09.02.2022 ರಂದು ಸದರಿ ಪ್ರಕರಣದಲ್ಲಿ ಉಳಿದ ಆರೋಪಿತರಾದ ರಾಜು ಬಿನ್ ಶ್ರೀನಿವಸಾಶೆಟ್ಟಿ ಶ್ರೀನಿವಾಸಶೆಟ್ಟಿ ಮುದ್ದುಶೆಟ್ಟಿ ಬಿನ್ ಶ್ರೀನಿವಾಸಶೆಟ್ಟಿ ನವೀನ ಬಿನ್ ಮುದ್ದಶೆಟ್ಟಿ ರವರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ವೃತ್ತ ನಿರೀಕ್ಷಕರು ಆದೇಶಿಸಿದ್ದು ಆ ಪ್ರಕಾರ ನಾನು ದಿನಾಂಕ 14.02.2022 ರಂದು ಸಿಪಿಐ ಕಛೇರಿಯ ಸಿಬ್ಬಂದಿಗಳಾದ ಹೆಚ್.ಸಿ 131 ಸತೀಶ, ಹೆಚ್.ಸಿ 94 ಅಶೋಕ ಮತ್ತು ಪಿಸಿ 378 ರಾಜು ರವರನ್ನು ಇಲಾಖಾ ಜೀಪಿನಲ್ಲಿ ತೆರಕಣಾಂಬಿ,ಕಗ್ಗಳ, ಗುಂಡ್ಲುಪೇಟೆ ಮತ್ತು ಕೋಡಹಳ್ಳಿ ಕಡೆ ಗಸ್ತು ಮಾಡಿ ಬಾತ್ಮಿದಾರರಿಂದ ಬಂದ ಮಾಹಿತಿ ಮೇರೆಗೆ ಬೆಳಗ್ಗೆ 9.30 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು ಅಣ್ಣೂರು ಕೆರೆ ಗ್ರಾಮದ ರಂಗಶೆಟ್ಟಿರವರ ತೋಟದ ಶೆಡ್ ನಲ್ಲಿ ಶ್ರೀನಿವಾಸ ಶೆಟ್ಟಿ ಬಿನ್ ಶ್ರೀನಿವಾಸಶೆಟ್ಟಿ ಮುದ್ದುಶೆಟ್ಟಿ ಬಿನ್ ಶ್ರೀನಿವಾಸಶೆಟ್ಟಿನವೀನ ಬಿನ್ ಮುದ್ದಶೆಟ್ಟಿ ರವರನ್ನು ರವರನ್ನು ವಶಕ್ಕೆ ಪಡೆದು ಬೆಳಗ್ಗೆ 11.30 ಗಂಟೆಗೆ ನಂಜನಗೂಡು ವೃತ್ತ ನಿರೀಕ್ಷಕರ ಕಛೇರಿಗೆ ಹಾಜರಾಗಿ ಆರೋಪಿತರನ್ನು ಸಿಪಿಐ ರವರ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿದ್ದೆನು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.48** ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.48 (ಎ)** ಎಂದು ಗುರುತಿಸಲಾಯಿತು. ನಾನು ವಶಕ್ಕೆ ಪಡೆದುಕೊಂಡು ಸಿಪಿಐ ರವರ ಮುಂದೆ ಹಾಜರುಪಡಿಸಿದ್ದ ಆರೋಪಿತರನ್ನು ನೋಡಿದರೆ

ಗುರುತಿಸತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ದಿನ 5 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರು ಇದ್ದು, 5 ನೇ ಆರೋಪಿ ಪರ ವಕೀಲರು 5 ನೇ ಆರೋಪಿ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ</u>** :

ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ನಮ್ಮ ಠಾಣಾ ವ್ಯಾಪ್ತಿಗೆ ಬರುವ ಯಾವುದೇ ಪ್ರಕರಣದಲ್ಲಿ ಬಾಲಕ ನಾಪತ್ತೆಯಾದ ಬಗ್ಗೆ ದೂರು ಬಂದಿರಲಿಲ್ಲ. ದೂರನ್ನು ಯಾರನ್ನು ಬರೆದಿದ್ದರು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದೆ. ದೂರನ್ನು ಪಿರ್ಯಾದುದಾರರು ತಂದು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಆಗದವರ ಪ್ರಭಾವಕ್ಕೆ ಒಳಗಾಗಿ ದಿನಾಂಕ 04.01.2022 ರಂದು ಮಧ್ಯಾಹ್ನ 12.00 ಗಂಟೆಗೆ ನಿಪಿ-1 ಅನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಕೊಡಲು ಒಂದು ದಿವಸ ವಿಳಂಭ ಆಗಿರುವ ಬಗ್ಗೆ ನಾನೇನು ವಿಚಾರಣೆ ಮಾಡಿರುವುದಿಲ್ಲ ದುಾರನ್ನು ಪಡೆದುಕೊಂಡು ಪ್ರಕಾರಣ ದಾಖಲು ಮಾಡಿದ್ದೆ. ಸಿಪಿಐ ರವರು ಕೊಟ್ಟಂತಹ ಜ್ಞಾಪನದಲ್ಲಿ ಆರೋಪಿತರ ಚಹರೆಗಳನ್ನು,ಹೆಸರು, ತಂದೆಯ ಹೆಸರು ಮತ್ತು ಅವರ ವಯಸ್ಸು ಹೇಳಿರುವುದಿಲ್ಲ ಎಂದರೆ ಸರಿ. ನಾನು ಯಾವುದೇ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ವೃತ್ತ ನಿರೀಕ್ಷಕರ

ಮುಂದೆ ಹಾಜರುಪಡಿಸಿ ವರದಿ ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಾರಂಭಿಕ ಹಂತದಲ್ಲಿಯೇ ನಿಪಿ–1 ರಲ್ಲಿ ಹೇಳಿರುವಂತಹ ಯಾವುದೇ ಘಟನೆ ಆಗಿಲ್ಲ ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**